**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**
**ದಿನಾಂಕಃ 24.03.2023.**

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ವಕೀಲರಿಂದಃ**

3. ನನ್ನ ಮೂಲ ಊರು ಹಿರೂರು, ಬಿಜಾಪುರ . ನಾನು ಕಾರವಾರಕ್ಕೆ ಬಂದು 2 ವಾರ ಆಗಿತ್ತು. ಮೃತ ವ್ಯಕ್ತಿ ರವಿ ಲಮಾಣಿ ಅವರು ಯಾವ ಊರಿನಿಂದ ಕಾರವಾರಕ್ಕೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲಾ. ನಾನು , ಚಾಸಾ.8 ಮತ್ತು ಮೃತ ವ್ಯಕ್ತಿ ರವಿ ಅವರು ಒಂದೇ ಕಡೆಗೆ ಇದ್ದೆವು ಎಂದರೆ ಸರಿ. ನಾನು ಕಾರವಾರಕ್ಕೆ ಸ್ವಲ್ಪ ದಿನದ ಹಿಂದೆ ಬಂದಿದ್ದರಿಂದ ಮಾಜಾಳಿ ರಸ್ತೆಯ ಬಗ್ಗೆ ಹಾಗೂ ಎಲ್ಲಿ ತಿರುವುಗಳಿವೆ ಎಂದು ನನಗೆ ಸರಿಯಾಗಿ ತಿಳಿದಿರಲಿಲ್ಲಾ ಎಂದರೆ ಸರಿಯಲ್ಲ. ಗೋವಾದಿಂದ ಕಾರವಾರಕ್ಕೆ ಬರುವ ರಸ್ತೆಯಲ್ಲಿ ಆ ಸಮಯಕ್ಕೆ ಬ್ರಿಡ್ಜ ಕೆಲಸ ನಡೆಯುತ್ತಿತ್ತು ಎಂದರೆ ಸರಿ. ಬ್ರಿಡ್ಜ ಕೆಲಸ ನಡೆಯುತ್ತಿದ್ದರಿಂದ ಒಂದೇ ರಸ್ತೆಯಲ್ಲಿ ಕಾರವಾರದಿಂದ ಗೋವಾಕ್ಕೆ ಹೋಗುವ ವಾಹನಗಳು ಮತ್ತು ಗೋವಾದಿಂದ ಕಾರವಾರಕ್ಕೆ ಬರುವ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿಯಲ್ಲ. ಗೋವಾದಿಂದ ಕಾರವಾರಕ್ಕೆ ಬರುವ ರಸ್ತೆ ಆ ಸಮಯಕ್ಕೆ ಮುಚ್ಚಿತ್ತು ಎಂದರೆ ಸರಿಯಲ್ಲ. ನಾನು ಘಟನಾ ದಿನ ಕಾರವಾರದಿಂದ ಮಾಜಾಳಿಗೆ ಬಸ್ಸಿನಲ್ಲಿ ಸಂಚರಿಸಿದ್ದು, ಬಸ್ಸಿನ ಟಿಕೇಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲಾ. ಬಸ್ಸಿನ ನೋಂದಣಿ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿರುವುದಿಲ್ಲಾ ಎಂದರೆ ಸರಿ. ನನಗೆ ಕನ್ನಡ ಓದಲು ಸ್ವಲ್ಪ ಸ್ವಲ್ಪ ಬರುತ್ತದೆ. ನಿಪಿ.1 ನ್ನು ಪೋಲೀಸರು ಬರೆದಿರುತ್ತಾರೆ. ನಾನು ನಿಪಿ.1 ನ್ನು ಓದಿರುವುದಿಲ್ಲಾ. ನಿಪಿ.1 ನ್ನು ಬರೆಯಲು ನಾನು ಪೋಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಿಪಿ.1 ರಲ್ಲಿ ಯಾವ ಪುಟದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲಾ.

ನಾನು ನಿಪಿ.1 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಾನು 2 –3 ಕಡೆಗೆ ಸಹಿ ಮಾಡಿದ್ದೇನೆ. ನಿಪಿ.2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಪಿ.3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.4 ಮತ್ತು 5 ರ ಮೇಲೆ ದಿನಾಂಕ ಮತ್ತು ಸಮಯ ಇರುವುದಿಲ್ಲಾ ಎಂದರೆ ಸರಿ. ನಿಪಿ.4 ಮತ್ತು 5 ನ್ನು ಠಾಣೆಯಲ್ಲಿ ತಯಾರು ಮಾಡಿರುತ್ತಾರೆಂದರೆ ಸರಿಯಲ್ಲ. ನಿಪಿ.4 ಮತ್ತು 5 ರಲ್ಲಿ ರಸ್ತೆ ಸ್ವಲ್ಪ ದಿನಗಳ ಹಿಂದೆ ನಿರ್ಮಾಣ ಮಾಡಿರುವುದಾಗಿ ಕಾಣಿಸುತ್ತದೆ ಎಂದರೆ ಸರಿ. ಘಟನಾ ದಿನದಂದು ನಾವು ಕಚ್ಚಾ ರಸ್ತೆಯ ಮೇಲೆ ನಡೆದುಕೊಂಡು ಹೋಗುತ್ತಿದ್ದೆವು. ನಿಪಿ.4 ಮತ್ತು 5 ರಲ್ಲಿ ಕಾಣಿಸುವ ಕಚ್ಚಾ ರಸ್ತೆಯಲ್ಲಿ ವಾಹನದ ಟೈಯರ ಗುರುತುಗಳು ಕಾಣಿಸುವುದಿಲ್ಲಾ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾವು ನಡೆದುಕೊಂಡು ಹೋಗುವಾಗ ಹಿಂದುಗಡೆಯಿಂದ ಯಾವ ವಾಹನ ಬರುತ್ತಿದೆ ಎಂದು ಕಾಣಿಸುವುದಿಲ್ಲಾ ಎಂದರೆ ಸರಿ. ನಾವು 3 ಜನ ಕಚ್ಚಾರಸ್ತೆಯಲ್ಲಿ ಅಡ್ಡವಾಗಿ ಸಾಲಿನಲ್ಲಿ ಹೋಗುತ್ತಿದ್ದೆವು. ನಾವು ಘಟನಾ ದಿನದಂದು ಡಾಂಬರು ರಸ್ತೆಯಲ್ಲಿ ಅಡ್ಡವಾಗಿ ಹೋಗುತ್ತಿದ್ದೆವು , ಹಾಗಾಗಿ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಘಟನಾ ದಿನದಂದು ಬ್ರಿಡ್ಜ ನಿರ್ಮಾಣ ನಡೆಯುತ್ತಿದ್ದರಿಂದ ಒಂದೇ ರಸ್ತೆಯಲ್ಲಿ ಕಾರವಾರದಿಂದ ಗೋವಾಕ್ಕೆ ಹೋಗುವ ವಾಹನಗಳು ಮತ್ತು ಗೋವಾದಿಂದ ಕಾರವಾರಕ್ಕೆ ಬರುವ ವಾಹನಗಳು ಓಡಾಡುತ್ತಿದ್ದವು ಎಂದರೆ ಸರಿಯಲ್ಲ. ಘಟನಾ ಸಮಯಕ್ಕೆ ಎದುರುಗಡೆಯಿಂದ ವಾಹನ ಬರುತ್ತಿದ್ದು , ನಾವುಗಳು ರಸ್ತೆಯಲ್ಲಿ ಅಡ್ಡ ಹೋಗಿದ್ದರಿಂದ ಈ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತ ನಮ್ಮ ತಪ್ಪಿನಿಂದ ನಡೆದಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಘಟನಾ ಸ್ಥಳದಲ್ಲಿ ಬ್ಯಾರಿಕೇಡನ್ನು ಹಾಕಿ ದಾರಿಯನ್ನು ಮುಚ್ಚಿರುವುದಿಲ್ಲಾ. ಘಟನಾ ದಿನದಂದು ಅಪಘಾತ ನಡೆದಿರುವುದಿಲ್ಲಾ , ಮೃತ ವ್ಯಕ್ತಿ ನನ್ನ ಪರಿಚಯಸ್ಥನಾಗಿರುವುದರಿಂದ ಅವರ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**